6. ಗ್ಯಾಲರಿಯಿಂದ ಕೆಲವು ಪ್ರೇಕ್ಷಕರಿಂದ ಕರಪತ್ರಗಳನ್ನು ಎಸೆದ ಪ್ರಕರಣ.

(ಈ ಹಂತದಲ್ಲಿ ಗ್ಯಾಲರಿಯಲ್ಲಿದ್ದ ಕೆಲವು ಪ್ರೇಕ್ಷಕರು ಕರಪತ್ರಗಳನ್ನು ಎಸೆದು ಕೂಗಾಡುತ್ತಿದ್ದರು)

7. ಗಮನ ಸೆಳೆಯುವ ಸೂಚನೆಗಳು :

ವಿಷಯ (ಅ): ಡಾಂಬರು, ಸಿಮೆಂಟ್ ಮತ್ತು ಕಬ್ಬಿಣದ ಬೆಲೆಗಳ ಏರಿಕೆಯಿಂದ ಈಗಾಗಲೇ ಟೆಂಡರ್ ಆಗಿರುವ ಕಾಮಗಾರಿಗಳ ಕೆಲಸ ವಿಳಂಬವಾಗಿರುವ ಬಗ್ಗೆ. ಮುಂದುವರೆದುದು.

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ...

ಅಧ್ಯಕ್ಷರು: ಮಾನ್ಯ ಶ್ರೀ ಠಾಮರೆಡ್ಡಿಯವರೇ, ಇದರ ಬಗ್ಗೆ ಆರಂಭ ಮಾಡಿ...

ಶ್ರೀ ಎನ್. ಧರ್ಮಸಿಂಗ್: ಹಿರಿಯ ಸದಸ್ಯರಾದ ಮಾನ್ಯ ರಮೇಶ್ ಕುಮಾರ್‌ರವರು ಹಾಗೂ ಇತರ ಸದಸ್ಯರು ಈಗಾಗಲೇ ಮಾತನಾಡಿದ್ದಾರೆ. ಈಗ ಗಮನ ಸೆಳೆಯುವ ಸೂಚನೆ ಅಜೆಂಡಾದಲ್ಲಿ ಇದೆ. ಯಾರ ಕಡೆಯಿಂದಲೂ ಉತ್ತರ ಬಂದಿಲ್ಲ.....

ಶ್ರೀ ಕೆ.ಎಸ್. ಈಶ್ವರಪ್ಪ: ಗಮನ ಸೆಳೆಯುವ ಸೂಚನೆಯನ್ನು ಯಾರು ಕೇಳಬೇಕಾಗಿತ್ತೋ ಅವರೇ ಈಗ ಇಲ್ಲಿ ಇಲ್ಲ. ಮಾನ್ಯ ಡಿ.ಕೆ. ಶಿವಕುಮಾರ್‌ರವರು ಇಲ್ಲಿ ಇಲ್ಲ. ಉತ್ತರ ಹೇಳುವುದಕ್ಕೆ ನಾನು ತಯಾರಿದ್ದೇನೆ. ಈಗ ಅವರು ಬಂದು ಕೇಳಲಿ. ನಾನು ಹೇಳುವುದಕ್ಕೆ ತಯಾರಿದ್ದೇನೆ.

ಅಧ್ಯಕ್ಷರು: ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಅಜೆಂಡಾ ಹಾಕತಕ್ಕಂಥ ಕಾಲದಲ್ಲಿ ಅದರಲ್ಲಿ ಗಮನ ಸೆಳೆಯುವ ಸೂಚನೆಯನ್ನೂ ಕೂಡ ಹಾಕಿದ್ದಾರೆ. ಅದಕ್ಕೆ ಉತ್ತರ ತರಿಸಿಕೊಡತಕ್ಕಂಥದ್ದು ತಮ್ಮ ಜವಾಬ್ದಾರಿ. ಯಾರು ಗಮನ ಸೆಳೆಯುವ ಸೂಚನೆ ಹಾಕುತ್ತಾರೆ. ಅವರಿಗೆ ಒಂದು ಉತ್ತರದ ಪ್ರತಿ ಹೋಗಬೇಕಾಗುತ್ತದೆ. ಮಾನ್ಯ ರೇವಣ್ಣನವರು ಇವತ್ತು ಉತ್ತರ ಕೊಡಲಿಕ್ಕೆ ಇಲ್ಲಿ ನಿಂತಿದ್ದರು. ಆದರೆ ಅದರ ಪ್ರತಿ ಯಾರಿಗೂ ಸಿಗಲಿಲ್ಲ. ಗಮನ ಸೆಳೆಯುವ ಸೂಚನೆ ಪ್ರಸ್ತಾಪ ಮಾಡಿದಾಗ it will become the property of the House...

ನಮಗೂ ಹಾಗೂ ಎಲ್ಲಾ ಸದಸ್ಯರಿಗೂ ಕೂಡ ಉತ್ತರದ ಪ್ರತಿ ಬೇಕಾಗುತ್ತದೆ. ಇದು ಯಾವುದೂ ಸರಿಯಾದ ರೀತಿಯಲ್ಲಿ ಆಗಿಲ್ಲ. ನೀವು ಏನೋ ಒತ್ತಡದ ಮೇಲೆ ಯಾರ್ಯಾದರೋ ಗಮನ ಸೆಳೆಯುವ ಸೂಚನೆ ಹಾಕಿಕೊಂಡಿದಿರಿ. ಮತ್ತೊಂದು ಅಂಶ ಏನೆಂದರೆ, ನೀರಾವರಿ ಸಚಿವರು ಇವತ್ತು ಏನು ಹೇಳಿದರು ಅದು ಹೇಳತಕ್ಕಂಥದ್ದಲ್ಲ. ನನಗೆ ಮತ್ತು ಶಿವಕುಮಾರ್‌ರವರಿಗೆ ಮಾತುಕತೆಯಾಗಿದೆ, ನಿಮಗೆ ಮಾತುಕತೆ ಸಪರೇಟ್ ಇರಬಹುದು, ಗಮನ

ಸೆಳೆಯುವ ಸೂಚನೆ ಈ ಸದನದ ಸ್ವತ್ತು. ಇಂತ ಸಂದರ್ಭದಲ್ಲಿ ತಾವು ಹೇಳತಕ್ಕಂಥ ರೀತಿಯಲ್ಲಿ ನಾವು ಅವರು ಮಾತನಾಡಿದ್ದೇವೆ ಅದನ್ನು ಮುಂದಕ್ಕೆ ಹಾಕಿದ್ದೇವೆ ಎನ್ನತಕ್ಕಂಥ ರೀತಿಯಲ್ಲಿ ಹೇಳಬಾರದು. ಗಮನ ಸೆಳೆಯುವ ಸೂಚನೆ ಇಲ್ಲಿ ಬಂದಾಗ ಸಂಬಂಧಪಟ್ಟ ಸದಸ್ಯರು ಇಲ್ಲದೇ ಇದ್ದರೆ ಅದು ಬೇರೆ ರೀತಿಯಾಗುತ್ತದೆ. ಈ ರೀತಿಯ ಅವಕಾಶವನ್ನು ಕಲ್ಪಿಸಿಕೊಡುತ್ತಿದ್ದೀರಿ, ಈ ರೀತಿಯಾಗಿ ತಮ್ಮ ಕಾರ್ಯಾಲಯ ಕೆಲಸ ಮಾಡಿದರೆ ಯಾವ ತರಹ ಮಾಡಬಹುದು? ನೀವು ನಮ್ಮ ರಕ್ಷಣೆಗೆ ಬರುತ್ತಿಲ್ಲ. ಮುಂಜಾನೆ ಕೂಡ ನಾವು ಕೇಳಿದೆವು, ಇವತ್ತು ಬಂಡೆಪ್ಪ ಕಾಶಂಪೂರ್‌ರವರು ಕೂಡ ಬಂದಿದ್ದಾರೆ. ನಿಲುವಳಿ ಸೂಚನೆಯ ಮುಖಾಂತರ ರಾಜ್ಯದಲ್ಲಿ ರೈತರಿಗೆ ಆಗಿರತಕ್ಕಂಥ ತೊಂದರೆಗಳು ಏನು ಇವೆ, ಬೀಜ ಗೊಬ್ಬರ ಸರಿಯಾದ ಟೈಂಗೆ ಸಿಕ್ಕುತ್ತಿಲ್ಲ, ನಿನ್ನೆ ಕೂಡ ಗಮನ ಸೆಳೆಯುವ ಸೂಚನೆಯ ಸಂದರ್ಭದಲ್ಲಿ ಹೇಳಿದ್ದಾರೆ. ಇವತ್ತು ಬಿತ್ತುವಂಥ ಸಮಯದಲ್ಲಿ ಉದ್ದು ಸಿಕ್ಕುತ್ತಿಲ್ಲ. ಸಮಯ ಹಾಳಾಗಿ ಹೋಗುತ್ತಿದೆ. ಅವರೇನು ಹೇಳಿದರು ಸಂಬಂಧಪಟ್ಟಂಥ ಮಂತ್ರಿಗಳು ಬಂದ ಮೇಲೆ ಉತ್ತರ ಕೊಡುತ್ತಾರೆಂದು ಹೇಳಿದ್ದಾರೆ. ಇವತ್ತು ರೈತರ ಬಗ್ಗೆ ಚರ್ಚೆ ಮಾಡುವುದು ಬಿಟ್ಟರೆ ಬೇರೆ ಯಾವ ದೊಡ್ಡ ವಿಷಯ ಇಲ್ಲ. ಅದಕ್ಕೆ ಅವರು ಬಂದಿದ್ದಾರೆ, ನಮಗೆ ಉತ್ತರ ಒದಗಿಸಿ ಕೊಡಬೇಕು, ಅವರಿಂದ ನಮಗೆ ಸಮರ್ಪಕವಾದಂಥ ಉತ್ತರವನ್ನು ಕೊಡಿಸಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ನಾವು ಬಹಳ ಪ್ರಮುಖವಾದಂಥ ಗಮನ ಸೆಳೆಯುವ ಸೂಚನೆಯನ್ನು ತಂದಿದ್ದೇವೆ, ಅದಕ್ಕೆ ಯಾರಾದರೊಬ್ಬರು ಪ್ರತಿಕ್ರಿಯೆ ವ್ಯಕ್ತಪಡಿಸಬೇಕಲ್ಲವೇ ಸಾರ್? ಇದು ಬಹಳ ತುರ್ತಾಗಿದೆ, ನಾನು ಸ್ಪಷ್ಟವಾಗಿ ತಮಗೆ ಹೇಳುವುದು ಏನೆಂದರೆ, ಅಂಗನವಾಡಿ ಕಾರ್ಯಕರ್ತರಿಗೆ ನೇಮಕಾತಿ ಆಗುತ್ತಿದೆ, ಅಲ್ಲಿ ಗೊಂದಲ ಸೃಷ್ಟಿಯಾಗಿದೆ, ಏನಾದರೊಂದು ನಿರ್ಣಯ ಆಗಲಿ ಎಂದರೆ ಉತ್ತರನೂ ಇಲ್ಲ, ಹೇಳುವವರು ಇಲ್ಲ, ನಾವು ಹಾಗೂ ಮಾನ್ಯ ಕೃಷ್ಣಮೂರ್ತಿಯವರು ಮತ್ತಿತರು ನಾವು ನಾಲ್ಕು ಜನ ಸೇರಿ ತಂದಿದ್ದೇವೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ನನಗೊಂದು ಆಶ್ಚರ್ಯ, ಈ ಹದಿಮೂರು ವರ್ಷಗಳಲ್ಲಿ ಏನಾದರೂ ಗಮನ ಸೆಳೆದಿದ್ದರೆ ಏನಾದರೂ ಉತ್ತರ ಬಂದಿರುವುದು, ಮಂತ್ರಿಗಳು ಇಲ್ಲಿ ಓದಿ ಹೇಳುತ್ತಿದ್ದರು, ನಾವು ಅದರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೆ. ಈಗ ನೀವು ಅಜೆಂಡಾದಲ್ಲಿ ಈ ರೀತಿ ಸೇರಿಸಿ ಆ ಉತ್ತರ ಇಲ್ಲದೆ ಸರ್ಕಾರದ ಮುಂದೆ ನಾವು ಏನು ಪ್ರಸ್ತಾಪ ಮಾಡುವುದು ?

ಶ್ರೀ ಜೆ.ಸಿ. ಮಾಧುಸ್ವಾಮಿ: ಯಾರಾದರೂ ಇಲ್ಲಿ ಹೇಳಬೇಕಲ್ಲವೇ? ಅಜೆಂಡಾ ಓದಿಕೊಂಡಿಲ್ಲದೆ ಮಂತ್ರಿಗಳು ಹಾಗೆಯೇ ಅಸೆಂಬ್ಲಿಗೆ ಬರುತ್ತೀರಾ? ನಾವು ಕೇಳ ಬೇಕಾಗುತ್ತದೆ, ಮಂತ್ರಿಗಳು ಯಾರೂ ಅಜೆಂಡಾ ಓದುವುದಿಲ್ಲವೇ?

ಶ್ರೀ ವಾಟಾಳ್ ನಾಗರಾಜ್: ಇಲ್ಲದಿದ್ದರೆ ಒಂದು ದಿನ ಸದನ ಮುಂದಕ್ಕೆ ಹಾಕಿ. ಏಕೆಂದರೆ ಯಾರೂ ಮಂತ್ರಿಗಳು ಇಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ಸರ್ಕಾರ ನಡೆಸುವವರು ಅಜೆಂಡಾ ಒಂದೇ ಅಸೆಂಬ್ಲಿಗೆ ಬಂದರೆ ಗತಿ ಏನು ಸ್ಸಾರ್?

ಶ್ರೀ ಸಿ.ಬಿ. ಕೃಷ್ಣಬೈರೇಗೌಡ: ಉತ್ತರ ನಿರೀಕ್ಷೆ ಮಾಡಬಾರದೆಂದು ತಾವು ಹೇಳಿಬಿಟ್ಟರೆ ನಾವು ಸುಮ್ಮನೆ ಕುಳಿತುಬಿಡುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಉತ್ತರ ಬಾರದೆ ಇದ್ದರೆ, ನೀವು ಅಜೆಂಡಾದಲ್ಲಿ ಹಾಕಬಾರದಾಗಿತ್ತು.

ಶ್ರೀ ಜೆ.ಸಿ. ಮಾಧುಸ್ವಾಮಿ: ಅಲ್ಲ ಬೈದಿ ಟೈಂ ಇವರು ಕಳುಹಿಸುತ್ತಾರೆಂದು ಅವರು ಹಾಕಿರುತ್ತಾರೆ. ಆದರೆ ಇವರು ಉತ್ತರ ಕಳುಹಿಸಬೇಕಲ್ಲವೆ?

ಶ್ರೀ ವಾಟಾಳ್ ನಾಗರಾಜ್: ತಮ್ಮ ಕಾರ್ಯಾಲಯದ ಬಗ್ಗೆ ನಮ್ಮದೇನೂ ತಕರಾರು ಇಲ್ಲ. ಉತ್ತರ ಕಳುಹಿಸುವುದು ಮಂತ್ರಿಗಳ ಹಾಗೂ ಸರ್ಕಾರದ ಜವಾಬ್ದಾರಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಒಬ್ಬರು ಅಜೆಂಡಾ ನೋಡಿಲ್ಲವೆಂದರೆ ಈ ಅಸೆಂಬ್ಲಿ ದಿಕ್ಕು ಏನಾಗಬೇಕು?

ಅಧ್ಯಕ್ಷರು: ತಮ್ಮಿಂದ ನೋಟೀಸ್ ಬಂದ ಮೇಲೆ ಸರ್ಕಾರಕ್ಕೆ ಕಳುಹಿಸಿದ್ದಾರೆ, ಅಲ್ಲಿಂದ ಉತ್ತರ ಬಂದಿಲ್ಲ. ಅಜೆಂಡ್‌ದಲ್ಲಿ ಇದೆ ಎಂದು ನಾನು ತೆಗೆದುಕೊಂಡಿದ್ದೇನೆ. ಆದರೆ ಆ ಉತ್ತರ ಬಂದಿಲ್ಲ. ಆದುದರಿಂದ, ಮಧ್ಯಾಹ್ನ ಉತ್ತರ ತರಿಸಿ ಕೊಡಿಸುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ತಮ್ಮ ವಿಷಯದಲ್ಲಿ ನಮ್ಮ ತಕರಾರು ಇಲ್ಲ, ತಾವೂ ಕೂಡ ನಿರೀಕ್ಷೆ ಮಾಡಿರುತ್ತೀರಿ ಇವತ್ತು ಉತ್ತರ ಬರುತ್ತದೆಂದು ತಿಳಿದುಕೊಂಡು ಇಲ್ಲಿ ಅಜೆಂಡಾದಲ್ಲಿ ಹಾಕಿಬಿಡುತ್ತೀರಿ. ಯಾರಾದರೊಬ್ಬ ಘನತೆವೆತ್ತ ಮಂತ್ರಿಗಳು ಅಜೆಂಡಾ ಏನು ಇದೆ, ಉತ್ತರ ಹೋಗಿದೆಯೋ ಇಲ್ಲವೋ ಚೀಫ್‌ಮಿನಿಸ್ಟರ್ ಇಲ್ಲಾಂದ್ರೆ ನಾವು ಯಾರಾದರೂ ನಿಂತು ಕೊಳ್ಳಬೇಕಾ? ಹೇಳಬೇಕಾ? ಏನು ವಿಷಯ ಕೇಳುತ್ತಾರೆಂದರೆ ತಯಾರಾಗಿ ಬರದೇ ಹೋದರೆ, ನಾವು ಈ ಸಭೆಯಲ್ಲಿ ಗಮನ ಸೆಳೆಯುವ ಸೂಚನೆ ಏಕೆ ಕೊಡಬೇಕು?